**ಓ.ಎಸ್. ನಂಬರಃ 44/2025**

**ಪಿ. ಡಬ್ಲ್ಯೂಃ 1**

**(ಸಾಕ್ಷಿಗೆ ಪ್ರಮಾಣವಚನ ಭೋದಿಸಲಾಯಿತು, ತಾಃ 11-12-2025)**

**ಪಾಟೀ ಸವಾಲುಃ ಪ್ರತಿವಾದಿಗಳ ಪರ ಶ್ರೀ ಜೆ.ಡಿ.ಬಿ. ವಕೀಲರಿಂದ,**

ನಾನು ಈ ದಾವೆಯನ್ನು ಮೂಡು ಭಟ್ಕಳ ಗ್ರಾಮದ ಸರ್ವೆ ನಂ. 6ಅ/1 ರಲ್ಲಿರುವ 00-05-12 ಜಾಗಕ್ಕೆ ಸಂಬಂಧಿಸಿದಂತೆ ದಾಖಲಿಸಿರುತ್ತೇನೆ. ಸದ್ರಿ ಜಾಗದ ಪೂರ್ವಕ್ಕೆ ರಸ್ತೆ, ಪಶ್ಚಿಮಕ್ಕೆ 1 ರಿಂದ 3 ನೇ ಪ್ರತಿವಾದಿಗಳ ಮನೆ ಇರುವ ಜಾಗ, ಉತ್ತರಕ್ಕೆ ನನ್ನ ಜಾಗ, ದಕ್ಷಿಣಕ್ಕೆ ನನ್ನ ಮನೆ ಇರುತ್ತದೆ. ನನ್ನ ಮನೆ ಇರುವ ಜಾಗದ ಸರ್ವೆ ನಂ. 6ಅ/6 ರಲ್ಲಿರುತ್ತದೆ. ಪ್ರತಿವಾದಿಗಳ ಮನೆ ಇರುವ ಸ್ಥಳ ಸರ್ಕಾರಿ ಜಾಗ ಆಗಿರುತ್ತದೆ. ಅದರ ಸರ್ವೆ ನಂ. 6ಅ1/ಪಿ5 ರಲ್ಲಿ ಬರುತ್ತದೆ ಎಂದರೆ ಸರಿಯಲ್ಲ. ಪ್ರತಿವಾದಿಗಳ ಮನೆ ಯಾವ ಸರ್ವೆ ನಂಬರ್ ನಲ್ಲಿ ಬರುತ್ತದೆ ಎಂದು ನನಗೆ ಗೊತ್ತಿಲ್ಲ, ಆದರೆ ಮೂಡು ಭಟ್ಕಳ ಶಾಲೆಯ ಸ್ಥಳದಲ್ಲಿರುತ್ತದೆ. ನಮ್ಮ ಮಾಲ್ಕಿ ಹಕ್ಕಿನ ಜಾಗಕ್ಕೆ ಮಾತ್ರ ಈ ದಾವೆಯನ್ನು ತಂದಿರುತ್ತೇನೆ. ದಾವಾ ಸ್ಥಳದಲ್ಲಿ ಒಂದುವೇಳೆ ಸರ್ಕಾರಿ ಜಾಗ ಇದ್ದರೆ, ಅದರಲ್ಲಿ ನಾನು ಹಕ್ಕು ಕೇಳುವುದಿಲ್ಲ. ಸಾಕ್ಷಿಯು ಸ್ವತಃ ದಾವಾ ಸ್ಥಳದಲ್ಲಿ ಸರ್ಕಾರಿ ಜಾಗ ಇರುವುದಿಲ್ಲ ಎಂದು ಹೇಳಿರುತ್ತಾರೆ. ದಾವಾ ಸ್ಥಳದಲ್ಲಿ ಒಂದುವೇಳೆ ಸರ್ಕಾರಿ ಜಾಗ ಇದ್ದರೆ, ಅದು ನಮ್ಮ ಕಬ್ಜಾದಲ್ಲಿ ಇರುವುದಿಲ್ಲ ಎಂಬ ಪ್ರಶ್ನೆಗೆ ಸಾಕ್ಷಿಯು ದಾವಾ ಸ್ಥಳದಲ್ಲಿ ಸರ್ಕಾರಿ ಜಾಗ ಇರುವುದಿಲ್ಲ ಎಂದು ಉತ್ತರಿಸಿರುತ್ತಾರೆ.

2. ದಾವಾ ಸ್ಥಳದ ಪಹಣಿ ಪತ್ರಿಕೆಯನ್ನು ನಾನು ನೋಡಿರುತ್ತೇನೆ. ದಾವಾ ಸ್ಥಳದ ಪಹಣಿ ಪತ್ರಿಕೆಯನ್ನು ನನ್ನ ವಕೀಲರಿಗೆ ನೀಡಿದ ಬಗ್ಗೆ ನನಗೆ ನೆನಪಿಲ್ಲ, ಆದರೆ ದಾವಾ ಸ್ಥಳದ ಇ-ಸ್ವತ್ತಿನ ಪ್ರತಿಯನ್ನು ನನ್ನ ವಕೀಲರಿಗೆ ನೀಡಿರುತ್ತೇನೆ. ದಾವಾ ಸ್ಥಳದ ಪಹಣಿ ಪತ್ರಿಕೆಯನ್ನು ಈ ದಾವೆ ದಾಖಲಿಸುವ ಪೂರ್ವದಲ್ಲಿ ಓದಿ ತಿಳಿದುಕೊಂಡಿರುತ್ತೇನೆ. ನನಗೆ ಕನ್ನಡ ಓದಲು, ಬರೆಯಲು ಬರುತ್ತದೆ. ನಾನು 2019 ನೇ ಸಾಲಿನ ಪಹಣಿ ಪತ್ರಿಕೆಯನ್ನು ನಾನು ನೋಡಿರುತ್ತೇನೆ. ದಾವಾ ಸ್ಥಳದ ಸರ್ವೆ ನಂ. 6ಅ1/ಪಿ5 ರಲ್ಲಿರುವ 00-05-12 ಜಾಗ ಆಗಿರುತ್ತದೆ. ಅದು ಮೂಡು ಭಟ್ಕಳ ಗ್ರಾಮದಲ್ಲಿರುತ್ತದೆ. ಸಾಕ್ಷಿಗೆ ಮೂಡ ಭಟ್ಕಳ ಗ್ರಾಮದ ಸರ್ವೆ ನಂ. 6ಅ1/ಪಿ5 ರಲ್ಲಿಯ ಪಹಣಿ ಪತ್ರಿಕೆಯನ್ನು ತೋರಿಸಿ, ಅದು ದಾವಾ ಸ್ಥಳದ ಪಹಣಿ ಪತ್ರಿಕೆ ಎಂದರೆ, ಸಾಕ್ಷಿಯು ಅದನ್ನು ನೋಡಿ ಹೌದು ಎಂದು ಹೇಳಿರುತ್ತಾರೆ. ಹಾಗಾಗಿ ಸದ್ರಿ ದಾಖಲೆಯನ್ನು ನಿಡಿ-1 ಎಂದು ಗುರುತಿಸಲಾಯಿತು. ನಿಡಿ-1 ಪಹಣಿ ಪತ್ರಿಕೆಯಲ್ಲಿ 00-00-12 ಜಾಗವು ಸರ್ಕಾರಕ್ಕೆ ಸೇರಿದ್ದಾಗಿರುತ್ತದೆ ಎಂದರೆ ಸುಳ್ಳು. ಸರ್ವೆ ನಂ. 6ಅ1/ಪಿ5 ರಲ್ಲಿ 00-00-12 ಜಾಗವು ಮಾದೇವ ಶನಿಯಾರ ನಾಯ್ಕ ಎಂಬುವವರಿಗೆ ಮಂಜೂರಿಯಾಗಿರುತ್ತದೆ. ಆ ರೀತಿ ಮಾದೇವ ಶನಿಯಾರ ನಾಯ್ಕ ರವರ ಹೆಸರಿಗೆ ಆದ ಪಟ್ಟಾವನ್ನು ನಾನು ನೋಡಿರುವುದಿಲ್ಲ. ಯಾವ ದಾಖಲೆಯ ಆಧಾರದಲ್ಲಿ ಮಾದೇವ ಶನಿಯಾರ ನಾಯ್ಕ ರವರಿಗೆ ಸರ್ವೆ ನಂ. 6ಅ1/ಪಿ5 ರಲ್ಲಿ 00-00-12 ಜಾಗವು ಮಂಜೂರಿಯಾಗಿದೆ ಎಂದು ಹೇಳುತ್ತಿದ್ದೀರಿ ಎಂಬ ಪ್ರಶ್ನೆಗೆ ಸಾಕ್ಷಿಯು ನಾನು ದಾವಾ ಸ್ಥಳವನ್ನು ಖರೀದಿ ಮಾಡಿದ್ದು, ಅದರ ಹಿಂದಿನ ವಿಚಾರ ನನಗೆ ಗೊತ್ತಿಲ್ಲ ಎಂದು ಉತ್ತರಿಸಿರುತ್ತಾರೆ. ಖರೀದಿಯ ಕಾಲಕ್ಕೆ ದಾವಾ ಸ್ಥಳದ ದಾಖಲಾತಿಗಳನ್ನು ನಾನು ಪರಿಶೀಲನೆ ಮಾಡಿರುತ್ತೇನೆ. ಆ ರೀತಿ ನಾನು ದಾವಾ ಸ್ಥಳದ ಇ-ಸ್ವತ್ತಿನ ಪ್ರತಿ, ದಾವಾ ಸ್ಥಳಕ್ಕೆ ಸೇರಿದ ಗೌರಿ ಗಣಪತಿ

ದೇವಾಡಿಗ ರವರ ಹೆಸರಿನಲ್ಲಿದ್ದ ಕ್ರಯ ಪತ್ರವನ್ನು ನೋಡಿರುತ್ತೇನೆ. ಗೌರಿ ಗಣಪತಿ ದೇವಾಡಿಗ ರವರು ಯಾರಿಂದ ದಾವಾ ಸ್ಥಳ ಖರೀದಿ ಮಾಡಿದ್ದರೆಂದು ನನಗೆ ಗೊತ್ತಿಲ್ಲ. ಸದ್ರಿ ಗೌರಿ ಗಣಪತಿ ದೇವಾಡಿಗ ರವರು ಬಿನ್ ಶೇತ್ಕಿ ಜಾಗವನ್ನು ಖರೀದಿ ಮಾಡಿದ್ದರು. ದಾವಾ ಸ್ಥಳವನ್ನು ಯಾರು ಬಿನ್ ಶೇತ್ಕಿ ಮಾಡಿಸಿದರೆಂದು ನನಗೆ ಗೊತ್ತಿಲ್ಲ.

**ಈ ಹಂತದಲ್ಲಿ ಮುಂದುವರೆದ ಪಾಟೀ ಸವಾಲಿಗೆ ಪ್ರತಿವಾದಿಗಳ ಪರ ವಕೀಲರು ಸಮಯಾವಕಾಶ ಕೇಳಿದ್ದರಿಂದ ಮುಂದೂಡಲಾಯಿತು.**

**(ನನ್ನ ಹೇಳಿಕೆ ಪ್ರಕಾರ ಬಹಿರಂಗ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.)**

**ಓ. ಹೇ.ಕೇ. ಸರಿ ಇದೆ.**

**ಸಹಿ ಇದೆ.**

**ಹೆಚ್ಚುವರಿ ಸಿವಿಲ್ ಜಡ್ಜ್, ಭಟ್ಕಳ.**